## ೧೯೮೮-೮೯ ರಲ್ಲಿ ಮಂಜೂರಾದ ಐಸಿಡಿಎಸ್ ಬ್ಲಾಕ್‌ಗಳು

೪೮೨ (೭೯೦) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕೇಂದ್ರ ಸರ್ಕಾರದಿಂದ ೧೯೮೮-೮೯ ರಲ್ಲಿ ಮಂಜೂರಾಗಿರುವ ಐ. ಸಿ. ಡಿ. ಎಸ್. ಬ್ಲಾಕ್‌ಗಳೆಷ್ಟು ?

ಆ) ಹಾಗಿದಲ್ಲಿ, ಮಂಜೂರಾಗಿರುವ ಐ.ಸಿ.ಡಿ.ಎಸ್. ಮಂಜೂರಾದ ದಿನಾಂಕಗಳಾವುವು ?

ಇ) ಇವು ಯಾವಾಗ ಕಾರ್ಯ ಪ್ರಾರಂಭಿಸುವುವು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

(ಅ) ೧೪

(ಆ) ೨೮-೭-೮೮ ಮತ್ತು ೨೨-೧೨-೮೮

(ಇ) ದಿನಾಂಕ ೩೦-೩-೮೯ ಸರ್ಕಾರ ಆದೇಶ ಹೊರಡಿಸಿದೆ. ಶೀಘ್ರದಲ್ಲಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

## ಕರ್ನಾಟಕ ಗೃಹ ಮಂಡಳಿಯಲ್ಲಿ ಕೇಂದ್ರ ಸರಕಾರದಿಂದ ಮಂಜೂರಾದ ಹಣ ನಿವೇಶನ ಕುರಿತು

೪೮೩ (೭೮೦) ಶ್ರೀ ಗೋಪಾಲ ಮಾಕುಂದ ಕಾನಡೆ (ಸಿರ್ಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ಗೃಹ ಮಂಡಳಿಗೆ ಇದುವರೆಗೆ ಅಂದರೆ ೮೭-೮೮/೮೮-೮೯ ರಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ ?

ಆ) ಕರ್ನಾಟಕದಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಲಾಗಿದೆ ? ಈ ಮನೆಗಳನ್ನು ಕಟ್ಟುವುದು ಸರ್ಕಾರದವರೋ, ಕಂಟ್ರಾಕ್ಟರುಗಳೋ ?

ಇ) ಒಂದು ಮನೆಯ ನಕ್ಷೆ ಬಿಡಿಸಲು ಸರ್ಕಾರ ಎಷ್ಟು ಹಣ ಕೊಡುತ್ತದೆ. ಇದುವರೆಗೆ ೧೯೮೭-೮೮ ೧೯೮೮-೮೯ರ ವರೆಗೆ ನಕ್ಷೆ ಬಿಡಿಸಲು ನೀಡಲಾದ (ಕೊಟ್ಟ) ಹಣ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು),—

(ಅ) ಭಾರತ ಸರ್ಕಾರದಿಂದ ಕರ್ನಾಟಕ ಗೃಹ ಮಂಡಳಿಗೆ ಆರ್ಥಿಕನೆರವು ಇರುವುದಿಲ್ಲ.

(ಆ) ೭೭,೩೪೨ ಮನೆಗಳು ಕಟ್ಟಲಾಗಿದೆ, ಮನೆಗಳ ನಿರ್ಮಾಣ ಕೆಲಸವನ್ನು ಕೆ. ಎಲ್. ಎ, ಸಿ. ಕೆ. ಎಸ್, ಸಿ. ಸಿ., ಲೋಕೋಪ ಯೋಗಿ ಇಲಾಖೆ ಮತ್ತು ಇತರ ಸಂಬಂಧಪಟ್ಟ ಇಲಾಖೆಗಳ ಮುಖ್ಯಾಂತರ ನೋಂದಾಯಿಸಲ್ಪಟ್ಟ ಗುತ್ತಿಗೆದಾರರುಗಳಿಂದ ಮಂಡಳಿಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

(ಇ) ಪ್ರತಿ ಮನೆಯ ನಕ್ಷೆಯನ್ನು ಆಧರಿಸಿ ಶುಲ್ಕವನ್ನು ನಿಗದಿ ಮಾಡಲಾಗುತ್ತಿಲ್ಲ. ೧೯೮೭-೮೮ನೇ ಸಾಲಿನಲ್ಲಿ ರೂ. ೨೭.೯೫ ಲಕ್ಷಗಳು ಮತ್ತು ೭೮-೮೯ನೇ ಸಾಲಿನಲ್ಲಿ ರೂ. ೧೦.೫೭ ಲಕ್ಷಗಳು ನಕ್ಷೆ ಬಿಡಿಸಲು ಕರ್ನಾಟಕ ಗೃಹ ಮಂಡಳಿಯಿಂದ ನೀಡಲಾಗಿದೆ.

## ಗುಲ್ಬರ್ಗಾ ಜಿಲ್ಲಾಪರಿಷತ್ತಿಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

೪೮೪(೭೮೬) ಶ್ರೀ ಮಾಲೀಕಯ್ಯಾ ಗುತ್ತೇದಾರ್ (ಆಳ್ಳಂಬ್ಬರ).—ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಗುಲ್ಬರ್ಗ ಜಿಲ್ಲಾ ಪರಿಷತ್ತಿಗೆ ೧೯೮೭-೮೮ ಹಾಗೂ ೧೯೮೮-೮೯ನೇ ಸಾಲುಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ? (ಇಲಾಖಾವಾರು ಹಾಗೂ ಸಾಲುವಾರು ಮಾಹಿತಿಯನ್ನೊದಗಿಸುವುದು.

ಶ್ರೀ ಎಂ. ಪಿ. ಪ್ರಕಾಶ್(ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

(ಅ) ಇಲಾಖಾವಾರು ಹಾಗೂ ಸಾಲುವಾರು ಮಾಹಿತಿಯನ್ನು ಲಗತ್ತಿಸಿರುವ ತಃಖ್ತೆ ೧ ಮತ್ತು ೨ರಲ್ಲಿ ಕೊಟ್ಟಿರುತ್ತದೆ.